# ಕಾಫಿ ಪುಡಿಯಿಂದ ಪೈಂಟಿಂಗ್

ಉಡುಪಿ ಮೂಲದ ಮುಂಬಯಿಯಲ್ಲಿ ಹುಟ್ಟಿ ಬೆಳೆದ ಅಕ್ಷತಾ ಆತ್ಮಾರಾಂ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಳೆ. ಜೊತೆಗೆ ಈ ಕಾಫಿ ಪೈಂಟಿಂಗ್ ಕರಗತ ಮಾಡಿಕೊಂಡಿದ್ದಾಳೆ. ಈ ವಿಶಿಷ್ಟ ಪೈಂಟಿಂಗ್‌ಗೆ ಬೇಕಾಗಿರುವುದು ಕ್ಯಾನ್‌ವಾಸ್ ಬೋರ್ಡ್, ಇನ್‌ಸ್ಟಂಟ್ ಕಾಫಿ ಪುಡಿ, ಫೆವಿಕಾಲ್, ನೀರು, ಬ್ರಷ್ ಇವಿಷ್ಟೆ. ಈ ಕಾಫಿ ಕಲಾಕೃತಿ ಅದ್ಭುತವಾಗಿ ಮೂಡಿ ಬರುತ್ತದೆ.

**-ಪ್ರಭಾ ಪಿ.ಶಾಸ್ತ್ರಿ, ಶಿವಮೊಗ್ಗ**





# ಶಿರಗಾಪುರದ ಕಾಮಣ್ಣ

ಈ ಚಿತ್ರದಲ್ಲಿ ಕಾಣಿಸುತ್ತಿರುವ ಬೃಹದಾಕಾರದ ಕಾಮಣ್ಣ ಕಂಡು ಬರುವುದು ಚೆನ್ನಮ್ಮನ ಕಿತ್ತೂರಿನ ಸಮೀಪದ ಶಿರಗಾಪುರದಲ್ಲಿ. ಐದು ದಿನಗಳ ಕಾಲ ಈ ಊರಿನಲ್ಲಿ ಜಾತ್ರೆ ನಡೆದು ಕೊನೆಯ ದಿನ ಕಾಮ ದಹನವಾಗುತ್ತದೆ. ಇನ್ನೊಂದು ವೈಶಿಷ್ಟ್ಯವೆಂದರೆ ಹೋಳಿ ಹಬ್ಬದಂದು ಈ ಊರಲ್ಲಿ ಬಣ್ಣ ಆಡುವುದಿಲ್ಲ.

**ಚಿತ್ರ- ಬರಹ: ಶ್ರೀಶೈಲ ಎಸ್. ಅಂಗಡಿ, ಹುಣಶೀಕಟ್ಟಿ**

# ಹರಕೆಯ ಆಲದ ಮರ

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು ಜೋಳದಾಳ್‌ನ ಅಮ್ಮನಗುಡ್ಡದಲ್ಲಿ ಈ ವಿಶಿಷ್ಟ ಹರಕೆಯ ಆಲದ ಮರವಿದೆ. ಇದಕ್ಕೆ ಕಲ್ಲು ಕಟ್ಟಿದರೆ ತಮ್ಮ ಮನದಾಸೆ ಈಡೇರುವುದೆಂಬ ನಂಬಿಕೆ ಭಕ್ತರಲ್ಲಿದೆ. ಇದಕ್ಕೆ ಈಗಾಗಲೇ ಸಾವಿರಾರು ಜನರು ಕಲ್ಲು ಕಟ್ಟಿದ್ದು ಮರದ ರೆಂಬೆ ಕೊಂಬೆಗಳ ಮೇಲೆಲ್ಲ ಇವು ಕಂಡು ಬರುತ್ತವೆ. ಮರದ ಮುಂಭಾಗ ಕುಕ್ವಾಡೇಶ್ವರಿ ಪಾದ ಕಟ್ಟೆ ಇದೆ. ಈ ಮರವು ಕುಕ್ವಾಡೇಶ್ವರಿ ಮೂಲ ಮಂದಿರದಿಂದ ಒಂದು ಕಿ.ಮೀ. ದೂರದಲ್ಲಿದೆ.

**-ಡಾ.ಕೆ.ವಿ.ಸಂತೋಷ್, ಹೊಳಲ್ಕೆರೆ**

